ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಕೆ.ಆರ್. ವೃತ್ತ, ಬೆಂಗಳೂರು–1

E-Mail: prydirector.edu.sgkar@nic.in

ಸಂಖ್ಯೆ : ಸಿ7(8)ಪ್ರಾಶಿಅ/ಆರ್.ಟಿ.ಇ/ ಪ್ರ.ಪ್ರಕ್ರಿಯೆ /20–21/2019–20 ದಿ: 11.03.2020

## ಸುತ್ತೋಲೆ

ವಿಷಯ: ಶಿಕ್ಷಣ ಹಕ್ಕು ಕಾಯ್ದೆ 2009ರ ಸೆಕ್ಷನ್ 12(1)(ಬಿ) ಮತ್ತು 12(1)(ಸಿ)ರಡಿಯಲ್ಲಿನ ದಾಖಲಾತಿಗೆ ಮಗುವಿನ ವಯೋಮಿತಿ ಕುರಿತು

ಉಲ್ಲೇಖ:1) ಸರ್ಕಾರದ ಆದೇಶ ಸಂಖ್ಯೆ: ಇಡಿ: 708 ಪಿಜಿಸಿ 2017 ದಿ: 23.5.2018

2) ಸರ್ಕಾರದ ಆದೇಶ ಸಂಖ್ಯೆ: ಇಡಿ 111 ಯೋಯೋಕ: 2018 ದಿ: 17.5.2019

3) ಈ ಕಛೇರಿಯ ಸುತ್ತೋಲೆ ಸಮಸಂಖ್ಯೆ: ದಿ: 27.2.2020

------

2020–21ನೇ ಸಾಲಿಗೆ ಶಿಕ್ಷಣ ಹಕ್ಕು ಕಾಯ್ದೆ 2009ರ ಸೆಕ್ಷನ್ 12(1)(ಬಿ) ಮತ್ತು 12(1)(ಸಿ)ರಡಿಯಲ್ಲಿ ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿ ಅರ್ಹ ಮಕ್ಕಳ ದಾಖಲಾತಿಗೆ ಉಲ್ಲೇಖ(3)ರ ಸುತ್ತೋಲೆಯಲ್ಲಿ ಮಾರ್ಗಸೂಚಿ ಹಾಗೂ ವೇಳಾಪಟ್ಟಿಯನ್ನು ನೀಡಲಾಗಿದೆ. ಉಲ್ಲೇಖ (1) ಮತ್ತು (2)ರ ಸರ್ಕಾರದ ಆದೇಶಗಳನ್ವಯ ಪ್ರಾರಂಭಿಕ ತರಗತಿಗಳಾದ ಎಲ್.ಕೆ.ಜಿ ಮತ್ತು ಒಂದನೇ ತರಗತಿಗೆ ಪ್ರವೇಶ ಬಯಸುವ ಮಗುವಿನ ವಯೋಮಿತಿಯನ್ನು ನಿಗದಿಪಡಿಸಲಾಗಿದೆ. ಅದರಂತೆ ಆರ್.ಟಿ.ಇ. ಕಾಯ್ದೆ 2009ರ ಸೆಕ್ಷನ್ 12(1)(ಬಿ) ಮತ್ತು 12(1)(ಸಿ)ರಡಿಯಲ್ಲಿ ದಾಖಲಾಗುವ ಮಗುವಿನ ವಯೋಮಿತಿಯನ್ನು ಈ ಕೆಳಗಿನಂತೆ ನಿಗದಿಗೊಳಿಸಬೇಕಿದ್ದು ಅದರಂತೆ ತಂತ್ರಾಂಶದಲ್ಲಿ ಅಳವಡಿಸಲು ಕ್ರಮ ಜರುಗಿಸಲಾಗುವುದು.

| ಕ್ರ.ಸಂ | ತರಗತಿ | ವಯೋಮಿತಿ |
|---|---|---|
| 1 | 1ನೇ ತರಗತಿ | 5 ವರ್ಷ 5 ತಿಂಗಳು ಕನಿಷ್ಠ ಹಾಗೂ 7 ವರ್ಷಗಳ ಗರಿಷ್ಠ ವಯೋಮಾನ |
| 2 | ಎಲ್.ಕೆ.ಜಿ | 3 ವರ್ಷ 5 ತಿಂಗಳು ಕನಿಷ್ಠ ಹಾಗೂ 5 ವರ್ಷಗಳ ಗರಿಷ್ಠ ವಯೋಮಾನ |

ಮೇಲ್ಕಂಡಂತೆ ಎಲ್.ಕೆ.ಜಿ ಮತ್ತು 1ನೇ ತರಗತಿಗೆ ಪ್ರವೇಶ ವಯೋಮಿತಿಯಲ್ಲಿನ ಬದಲಾವಣೆಯನ್ನು ಸಾರ್ವಜನಿಕರಿಗೆ ಮತ್ತು ಪೋಷಕರಿಗೆ ಗಮನಕ್ಕೆ ತರಲು ಅಗತ್ಯ ಪ್ರಚಾರವನ್ನು ಮಾಡಲು ತಿಳಿಸಿದೆ.

ಆಯುಕ್ತರು

ಸಾರ್ವಜನಿಕ ಶಿಕ್ಷಣ ಇಲಾಖೆ

ಇವರಿಗೆ.

1. ರಾಜ್ಯದ ಎಲ್ಲಾ ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಇವರುಗಳಿಗೆ ಸೂಕ್ತ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರುಗಳಿಗೆ ಸೂಕ್ತ ಕ್ರಮಕ್ಕಾಗಿ
3. ಹಿರಿಯ ಸಹಾಯಕ ನಿರ್ದೇಶಕರು, ಇ. ಆಡಳಿತ ಶಾಖೆ ಆಯುಕ್ತರ ಕಛೇರಿ, ಇವರಿಗೆ ಕಳುಹಿಸುತ್ತಾ ಆರ್.ಟಿ.ಇ. ದಾಖಲಾತಿ ತಂತ್ರಾಂಶದಲ್ಲಿ ಸೂಕ್ತ ಬದಲಾವಣೆ ಮಾಡಲು ತಿಳಿಸಿದೆ.
4. ಕಛೇರಿ ಪ್ರತಿ.